ಮಂಟೇಸ್ವಾಮಿ ಮೂಡಿ ಬಂದರು. 'ನಾಯಿ ನರಿಗಳಿಗೆಲ್ಲ ಲಿಂಗ ಕಟ್ಟಿದರೆ ಆಗುವುದು ಹೀಗೆಯೇ. ಲಿಂಗದ ಎಂಜಲ ಉಂಬ ನಿಮ್ಮ ಗರ್ವಕ್ಕೆ ನೀವೇ ಬಲಿ... ಕಾಯಕವೇ ಇಲ್ಲಿ ಕರ್ಮ ಆಯಿತಲ್ಲಾ... ತಿಳಿನೀಲಿ ಕೆರೆಯ ನೀರ ನೀವೇ ಕೆನ್ನೀರ ಮಾಡಿ ಕಲಕಿಬಿಟ್ಟಿರಲ್ಲಾ... ಈಗ ನಿಮಗೆ ಧರ್ಮ ಬೇಕೆ? ಈ ಮೀಸಲುಗಳೆಲ್ಲ ಇನ್ನೇಕೆ ಬೇಕು! ಬಸವಣ್ಣಾ, ಏನೇನಾಗಿ ಹೋಯಿತಪ್ಪಾ... ಹೆಪ್ಪು ಮುನಿಯ ಬೆಪ್ಪು ಮನದಲ್ಲಿ ಹೋಗಿ ಕಾಯುವೆ... ಬಂದರೆ ನೀನಲ್ಲಿಗೆ ಬಾ' ಎಂದು ಆತ ಅತ್ತ ಮಾಯವಾದ.

ತಮಟೆ ನಗಾರಿಗಳು ಮೊಳಗಿದವು. ತತ್ವಪದಕಾರರು ಓಡೋಡಿ ಬಂದರು. ಊರ ಸಗ್ಗದ ಮನೆಯ ಬಾಗಿಲು ತೆರೆವ ಹಬ್ಬವ ಸಾರಿ ಜನವೆಲ್ಲ ನೆರೆದು ಒಟ್ಟಾದರು. ಅದೊಂದು ಸತ್ತವರ ಮನೆ. ಆತ್ಮಗಳು ಅಲ್ಲಿ ವರ್ಷಕ್ಕೆ ಒಮ್ಮೆ ಬಂದು ಹೋಗುತ್ತವೆ ಆ ಮನೆಯ ಬಾಗಿಲು ತೆರೆಯಬೇಕು; ವಿಚಿತ್ರ ಎಂದರೆ ಅದಕ್ಕೆ ಬಾಗಿಲುಗಳೇ ಇಲ್ಲ; ಆದರೂ ಬಾಗಿಲು ತೆರೆಯಲೇಬೇಕು. ಮಾಯದ ಬಾಗಿಲು; ಯಾರೋ ಮುಟ್ಟಿ ಮುಟ್ಟಿ ಬೇಡಿದರೆ ತಂತಾನೆ ತೆಗೆದು ಕೊಳ್ಳುತ್ತಿತ್ತು; ಯಾರ ಕಣ್ಣಿಗೂ ಕಾಣುತ್ತಿರಲಿಲ್ಲ ಅದು ಸ್ವರ್ಗದ ದಾರಿಗೆ ಇದ್ದ ಬಾಗಿಲು. ಶೂನ್ಯಮನೆಯೋ, ಶೂನ್ಯಬಾಗಿಲೋ ಏನೋ? ಸತ್ತವರೆಲ್ಲ ಯಾವ ಬಾಗಿಲಿಗೆ ಹೋದರು? ಬಸವಣ್ಣಾ... ನೆರಳುಗಳು ಮನೆ ಮಾಡಿಕೊಳ್ಳುತ್ತವೆಯೇನು? ಬಿಜ್ಜಳಾ, ನಿನ್ನ ಭಂಡಾರದ ಭದ್ರ ಬಾಗಿಲುಗಳನ್ನೆಲ್ಲ ಯಾರು ಬಿಚ್ಚಿ ತಿಂದರೋ, ಬಡವರು ಕೊಟ್ಟ ತೆರಿಗೆಯ ಯಾರ್‍ಯಾರು ಉಂಡರೋ... ಈಗ ಎಲ್ಲ ಬಾಗಿಲುಗಳ ದಾಟಿ ಹೋಗಲು ಹೊಸಿಲು ಹೊಸಿಲಿಗೂ ಎಷ್ಟೊಂದು ದಂಡ ಕಟ್ಟಬೇಕಾಗಿದೆಯಲ್ಲಾ ಎಂದು ಸಾಧುಗಳು ಹಾಡುತ್ತಿದ್ದರು. ಮನೆಯೊಳಗೆ ಮನೆಯೊಡೆಯನಿದ್ದಾನೋ ಇಲ್ಲವೋ! ಆಹಾ! ಎಂತಹ ಮಾಯೆ... ಹೆಬ್ಬಾಗಿಲ ಹೊಸಿಲ ಹಸಿರು ಗರಿಕೆ ಮೇಯುತ್ತಿದೆ. ಯಾವುದೋ ಬಳ್ಳಿ ಹಬ್ಬಿ ಕೆಂಪು ಹಣ್ಣುಗಳ ಮುತ್ತಿನ ಸರವ ಹಾಕಿದೆ. 'ಬಾಗಿಲಿನ ಬಳ್ಳಿಯೇ, ನೀನು ಆಕಾಶದ ಬಾಗಿಲ ತನಕ ಹಬ್ಬಿಕೊಂಡು ಹೋಗುವೆಯಾ' ಎಂದು ಶರಣನೊಬ್ಬ ಅಸಂಗತವಾಗಿ ವರ್ತಿಸುತ್ತಿದ್ದ.

'ಸಗ್ಗದ ಮನೆಗೆ ಹಿರಿಯರ ಆತ್ಮಗಳು ಬಂದು ಕೂತಿವೆ. ಸದ್ದಿಲ್ಲದೆ ಹೊರಡಿ, ಅವರು ಊರನ್ನೆಲ್ಲ ಸುತ್ತುವರು. ಹುಟ್ಟಿ ಬೆಳೆದ ಊರುಕೇರಿಯ ಕಂಡು ಕರಗುವರು' ಎಂದು ಯಾರೋ ಹೇಳಿದ ಕೂಡಲೇ ಎಲ್ಲಾ ಸ್ತಬ್ಧವಾಯಿತು. ನೀರವ ಮೌನ. ಕಪ್ಪೆಗಳ ನಿಗೂಢ ದನಿ. ಎಲ್ಲೋ ಗೂಬೆ ಕೂಗು. ದಣಿದ ನಿಶಾಚರಿ ಹಕ್ಕಿಗಳ ಏನೇನೋ ತರಂಗಾಂತರಂಗಗಳು. ಬೀಸುವ ಗಾಳಿ ಮೈಮುರಿಯುವಂತಿದೆ. ಮಬ್ಬು ತಾರೆಗಳು ತೂಕಡಿಸುತ್ತಿವೆ. 'ಛೇ ಛೇ...ಏನದು ಚೀತ್ಕಾರ... ಯಾರದು ಹಲ್ಲೆಕೋರರು.... ನಾಡ ಬಾಗಿಲಲ್ಲಿ ಏನದು ಆತಂಕವಾದಿಗಳ ಸಡಗರ; ಎಲ್ಲಿಂದ ಬಂದು ಬಾಂಬು ಕಟ್ಟಿಕೊಂಡು ಡಿಕ್ಕಿ ಹೊಡೆಯಲಿದ್ದೀರಿ... ಸಾಕಾಗಲಿಲ್ಲವೇ ಕೃತ್ಯಗಳು... ಇನ್ನೂ ಎಷ್ಟೊಂದು ಬಸವಣ್ಣರ ಮನೆಗಳ ಮದ್ದಿನ ಮನೆ ಮಾಡಬೇಕೆಂದಿರುವಿರಿ ಎಂದು ಯಾರೊ ಒಬ್ಬ ಅತ್ತ ಮುಖ ಮಾಡಿ ಕೇಳುತ್ತಿದ್ದ. ಅವನಾರೋ ಅನಾಮಿಕ... 'ನೋಡಿ ನೋಡಿ ಅವನಾ. ಎಷ್ಟು ಸುಳ್ಳು ಹೇಳುತ್ತಾನೆ ಸಂಸತ್ ಭವನವೇ ಮೊಳಗುವಂತೆ. ಅಯ್ಯೋ ಅದರ ಹತ್ತಾರು ಬಾಗಿಲುಗಳೆಲ್ಲ ನಾಪತ್ತೆಯಾಗಿವೆ. ಅಂತಂಥವರೇ ಅಲ್ಲಿ ಪ್ರವೇಶ ಪಡೆದಿದ್ದಾರೆ. ಅಯೋಗ್ಯ! ಎಷ್ಟು ಯೋಗ್ಯವಂತನಂತೆ ಮಾತನಾಡುವನಲ್ಲಾ! ಎಂತಹ ದೇಶಭಕ್ತಿ... ನಿರ್ಮಾಣ ನಟನೆ! ಇವರನ್ನು ಹೀಗೆ ಬಲಿಯಲು ಬಿಡಬಾರದಿತ್ತು! ಆಹಾ ಬಸವಣ್ಣ.... ಕಳಬೇಡವೇ ಕೊಲಬೇಡವೇ; ಎಲ್ಲಿಂದ ಎಲ್ಲಿಗೆ ಬಂದೋ' ಎನ್ನುತ್ತಾ ಕತ್ತಲೆಗೆ ಸರಿದ.

ಬಸವಣ್ಣನ ಮನೆ ಬೆಳದಿಂಗಳಲ್ಲೂ ಕರೆಗಟ್ಟಿದ್ದಂತಿತ್ತು. ನಾಯಿಗಳು ಊಳಿಡುತ್ತಿದ್ದವು. ಯಾರೋ ಮರ ಕಡಿಯುತ್ತಿರುವ ಸದ್ದು ಆಗಾಗ ಕೇಳಿ ಬರುತ್ತಿತ್ತು. ಮಹಾಮರವೇ ಇರಬೇಕು. ಯಾವ ದೋಣಿಗಾಗಿಯೋ... ಯಾರು ಯಾರ ಮನೆ ಬಾಗಿಲಿಗಾಗಿ ಕದ್ದು ಕಡಿಯುತ್ತಿರುವರು? ಯಾವ ರಕ್ತ ಚಂದನ ಮರವೋ? ಮರ ಒಂದೊಂದು ಕೊಡಲಿ ಏಟಿಗೂ ಸವಾಲು ಹಾಕುತ್ತಲೇ ಇತ್ತು.

ಆಹಾ! ಇದೇನಿದು ವಿಚಿತ್ರ ಅಸಂಗತ ಕೂಡಲ ಸಂಗಮ... ಇವನೆಲ್ಲಿದ್ದ ಈ ಅಮಾಸೆ ಈಗ ಇಲ್ಲಿಗೆ ಯಾಕೆ ಬಂದ... ಇಲ್ಲಿವನಿಗೇನು ಕೆಲಸ... ಕತ್ತಲ